**Q.P. Code – 50201**

## ದ್ವಿತೀಯ ಬಿ.ಎ./ಬಿ.ಎಸ್ಸಿ., ಪದವಿ ಪರೀಕ್ಷೆ

## ಸೆಪ್ಟೆಂಬರ್/ಅಕ್ಟೋಬರ್ 2013

## (ದೂರ ಶಿಕ್ಷಣ)

## ಕನ್ನಡ ಭಾಷಾ ಪತ್ರಿಕೆ – ೨

## (DAB/DSB 010) – ಪ್ರಾಚೀನ ಕನ್ನಡ ಕಾವ್ಯ–೨, ತುಘಲಕ್, ಆಯ್ದ ಸಣ್ಣ ಕಥೆಗಳು, ದೇವರು

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 70/80*

1. (ಅ) **ಒಂದರ** ಭಾವ ಸ್ವಾರಸ್ಯವನ್ನು ಸಂದರ್ಭದೊಡನೆ ವಿವರಿಸಿ : **1 × 4 = 4**

(೧) ಮರುಳು ಮಾಧವ ಮಹಿಯ ರಾಜ್ಯದ
ಸಿರಿಗೆ ಸೋಲುವನಲ್ಲ ಕೌಂತೇ
ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ
ಹೊರೆದ ದಾತಾರಂಗೆ ಹಗೆವರ
ಶಿರವನರಿದೊಪ್ಪಿಸುವೆನೆಂಬೀ
ಭರದೊಳಿರ್ದೆನು ಕೌರವೇಂದ್ರನ ಕೊಂದೆ ನೀನೆಂದ॥

(೨) ದೇವರೇ ನನ್ನ ಕೈ ಬಿಡಬೇಡ, ದೇವರೇ, ನನ್ನ ತೊಗಲಿಗೆ ಬಣ್ಣ ಕೊಟ್ಟ ರಕ್ತದಲ್ಲಿ ನನ್ನದೆಷ್ಟು ಇನ್ನೊಬ್ಬರದೆಷ್ಟು ತಿಳಿಯದೆ ಮರುಳಾಗಿದ್ದೇನೆ. ನಿನ್ನ ಹಾದಿಯಲ್ಲಿ ಹೊರಟ ನಾನು, ಹೀಗೆ ಏತಕ್ಕೆ ಬತ್ತಲೆಯಾಗಿ ಮರುಭೂಮಿಯಲ್ಲಿ ಅಲೆಯಬೇಕು? ನಿನ್ನ ಕರುಣೆಯಿಂದ ನನ್ನನ್ನು ಹೊಚ್ಚು ದೇವರೇ ನಿನ್ನ ಆಸರವನ್ನರಸಿ ಬಂದವನು ಹಂದಿಯಂತೆ ಕೊಳೆಯಲ್ಲಿ ಬಿದ್ದಿದ್ದೇನೆ.

(ಆ) **ಎಂಟು** ಪದಗಳಿಗೆ ಅರ್ಥ ಬರೆಯಿರಿ : **$8 \times \frac{1}{2} = 4$**

ಕಳ, ಗೇಹ, ಶಹರ, ಧರಣಿ, ಸಂಕಲೆ, ಮಲರ್, ಬೇನೆ, ಜಿಹ್ವೆ ತೆಂಕಣ, ರಜ, ವಜೀರ, ಚರಿಗೆ.

(ಇ) **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ : **2 × 2 = 4**

ಸಂಜಯ, ಚಂಡ ಕರ್ಮ, ಮಲತಾಯಿ, ರತನಸಿಂಹ.

2. **ನಾಲ್ಕಕ್ಕೆ** ಸಂದರ್ಭ ಸೂಚಿಸಿ ಟಿಪ್ಪಣಿ ಬರೆಯಿರಿ : **4 × 3 = 12**

(೧) ಸೂಟ್ಟಿಡೆಯಲಪ್ಪುದು ಕಾಣಾ ಮಹಾಜಿರಂಗದೊಳ್

(೨) ನನಗೆ ಇರುವುದು ಒಂದೇ ಜನ್ಮ, ಒಂದೇ ದೇಹ.

(೩) ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ

(೪) ಅನ್ನ ಇಲ್ಲದೆ ಬದುಕು ಎಂದರೆ ಕೊಲೆ ಅಲ್ಲದೆ ಇನ್ನೇನು?

(೫) ಪೆತ್ತ ಪರೀಷಹ ಜಯಿಮೆ ತಪಂ

(೬) ಮನುಷ್ಯತೆಯ ಗಡಿ ಮೀರಿ ದೇವರಾಗಲಿಕ್ಕೆ ಹವಣಿಸುತ್ತಿದ್ದೀರಿ.



ಪು.ತಿ.ನೋ.

**Q.P. Code – 50201**

3. (ಅ) **ಒಂದು** ಪ್ರಶ್ನೆಗೆ ಉತ್ತರಿಸಿ : **1 × 8 = 8**

(೧) ಸೀತಾಪಹರಣ ಪ್ರಕರಣದಲ್ಲಿ ರಾವಣನ ವ್ಯಕ್ತಿತ್ವದ ಚಿತ್ರಣ ವಿವರಿಸಿ.

(೨) ಕರ್ಣನ ಮನಸ್ಸಿನ ತುಮುಲವನ್ನು ಕುಮಾರವ್ಯಾಸ ಕಟ್ಟಿಕೊಟ್ಟಿರುವ ಬಗೆಯನ್ನು ಚಿತ್ರಿಸಿ.

(ಆ) **ಒಂದು** ಪ್ರಶ್ನೆಗೆ ಉತ್ತರಿಸಿ : **1 × 5 = 5**

(೧) ಕನಕದಾಸರು ಸಮಾಜದ ಡೊಂಕನ್ನು ವಿಡಂಬಿಸುವ ಬಗೆ ಹೇಗೆ?

(೨) ಜನಪದ ಗೀತೆಗಳಲ್ಲಿ ವ್ಯಕ್ತವಾಗಿರುವ ಸತಿ–ಪತಿ ಸಂಬಂಧಗಳನ್ನು ಸ್ಪಷ್ಟಪಡಿಸಿ.

4. (ಅ) **ಒಂದು** ಪ್ರಶ್ನೆಗೆ ಉತ್ತರಿಸಿ : **1 × 8 = 8**

(೧) ಮುಹಮ್ಮದ್ದನ ಹಿಂಸಾ ರಾಜಕಾರಣವನ್ನು ಕುರಿತು ಚರ್ಚಿಸಿ.

(೨) ನಜೀಬ, ಅಝೀಝು, ಶಿಹಾಬುದ್ದೀನ – ಈ ಪಾತ್ರಗಳನ್ನು ಕುರಿತು ಬರೆಯಿರಿ.

(ಆ) **ಒಂದು** ಪ್ರಶ್ನೆಗೆ ಉತ್ತರಿಸಿ : **1 × 5 = 5**

(೧) ಶೇಖ್ ಇಮಾಮುದ್ದೀನ

(೨) ಮಲತಾಯಿ

5. **ಒಂದು** ಪ್ರಶ್ನೆಗೆ ಉತ್ತರಿಸಿ : **1 × 10 = 10**

(೧) ನಾಕೊಂದ ಹುಡುಗಿ ಕಥೆಯ ವಸ್ತು ವಿಶಿಷ್ಟತೆಯನ್ನು ಕುರಿತು ಬರೆಯಿರಿ.

(೨) ನಾಗಮ್ಮನ ತ್ಯಾಗಮನೋಭಾವ ಅಜ್ಞಾತವಾಸಿ ಕಥೆಯಲ್ಲಿ ಅಭಿವ್ಯಕ್ತಿಗೊಂಡ ಬಗೆಯನ್ನು ವಿವರಿಸಿ.

6. ಒಂದು ಪ್ರಶ್ನೆಗೆ ಉತ್ತರಿಸಿ : **1 × 10 = 10**

(೧) ದೇವರ ಅಸ್ತಿತ್ವವನ್ನು ಕುರಿತಾಗಿ, ಪೇಲಿಯವಾದ ಮತ್ತು ಬಿಗ್‌ಬಾಂಗ್ ಥಿಯರಿಗಳಿಗಿರುವ ವ್ಯತ್ಯಾಸಗಳೇನು?

(೨) ದೇವರು ಎಂಥವನು? ಅವನು ಇದ್ದಾನೆಯೋ? ಅಥವಾ ಅವನು ನಾವು ತಂದುಕೊಂಡ ಭ್ರಮೆಯೋ? ಚರ್ಚಿಸಿ.

7. ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ. (**80** ಅಂಕಗಳ ಸ್ಕೀಂನವರಿಗೆ **ಕಡ್ಡಾಯ**) : **10**

(೧) ದೇವರು ಮತ್ತು ಮನುಷ್ಯನ ಸಂಬಂಧದ ಸ್ವರೂಪವನ್ನು ವಿವರಿಸಿ.

(೨) ದೇವತ್ವ ಪ್ರಾಚೀನ ಮತ್ತು ಆಧುನಿಕ ಬದುಕನ್ನು ಆವರಿಸಿಕೊಂಡ ಬಗೆಯನ್ನು ಚರ್ಚಿಸಿ.

---